ಸ್ವೀಕರಿಸಲು ಸಾಧ್ಯವಿರಲಿಲ್ಲ. ಸನ್ಯಾಸಿನಿಯಾಗುತ್ತೇನೆಂದು ಮುನಿಸಿಕೊಂಡು ಹೋದರು. ಆರು ತಿಂಗಳಿನಲ್ಲಿ ಖ್ಯಾತ ರಂಗಕರ್ಮಿಯೊಬ್ಬರನ್ನು ಮದುವೆಯಾದರು. ನಂತರ ರಸ್ತೆ ಅಪಘಾತವೊಂದರಲ್ಲಿ ಆಕೆ ದಾರುಣವಾಗಿ ತೀರಿಕೊಂಡರು. ತುಂಬಾ ಸಭ್ಯಳಾದ, ಅಪಾರ ಜೀವನಪ್ರೀತಿ ಇದ್ದ ಈ ದಿಟ್ಟ ಹೆಣ್ಣುಮಗಳು ನನ್ನನ್ನು ಆಗಾಗ ಕಾಡುತ್ತಾರೆ. ಕಥೆಗಳೆಂದರೆ ಶಕ್ತಿಯೋ, ದೌರ್ಬಲ್ಯವೋ ಎಂದು ಚಿಂತಿತನಾಗುತ್ತೇನೆ. ಆಕೆ ನಿರ್ಗಮಿಸಿದ ವಿಷಾದವೇ ನನ್ನಿಂದ ಮತ್ತೊಂದು ಕಥೆ ಬರೆಯಿಸಿತು. ಅದು 'ಹೊರಟು ಹೋಗುತ್ತಾರೆ' ಸುಧಾದಲ್ಲಿ ಪ್ರಕಟವಾಯಿತು (1984). ಪಾತ್ರಗಳಾಗಿ ಸಿಕ್ಕವರು ಕಥೆಗಳಾದಂತೆ, ಕಥೆಗಳನ್ನೋದಿ ಪಾತ್ರವಾಗುತ್ತಿದ್ದವರೂ ಅನೇಕ. ಬೇಗ ಕರಗುವ ಗುಣ, ಬೇಗ ಸಿಡಿದೇಳುವ ಗುಣ, ಬೇಗ ತಪ್ಪು ತಿಳಿಯುವ ಗುಣ ಇಂಥ ತ್ರಿಗುಣ ಮೂರ್ತಿಯಾಗಿದ್ದ ನಾನು ಎಪ್ಪತ್ತರ ದಶಕದಲ್ಲಿ ಒಂಬತ್ತು, ಎಂಬತ್ತರ ದಶಕದಲ್ಲಿ ಎಪ್ಪತ್ಮೂರು, ತೊಂಬತ್ತರ ದಶಕದಲ್ಲಿ ಹತ್ತು ಕಥೆಗಳನ್ನೂ ಬರೆದೆ. ಅನಂತರ ವರ್ಷಕ್ಕೊಂದು. ವಿಶೇಷವಾಗಿ 1981–90ರ ಅವಧಿಯಲ್ಲಿ ನಾನು ಕಥೆಗಳನ್ನು ಅದೆಷ್ಟು ಧ್ಯಾನಿಸಿದೆ, ಅದೆಷ್ಟು ವೇಗವಾಗಿ ಬರೆದೆ ಎಂದು ಅಚ್ಚರಿಯಾಗುತ್ತಿದೆ. ಒಂದು ಭಾನುವಾರ ನನಗೆ ಚೆನ್ನಾಗಿ ನೆನಪಿರುವಂತೆ 16–1–83 ರಂದು ಒಂದೇ ದಿನ ಪ್ರಜಾವಾಣಿಯಲ್ಲಿ 'ಎಲೆಕ್ಸನ್ನೂ ಕಾಲರಾ ಮಾರಿಯೂ', ಕನ್ನಡಪ್ರಭದಲ್ಲಿ 'ಪಾಲು', ಉದಯವಾಣಿಯಲ್ಲಿ 'ಬಲಿ' ಪ್ರಕಟವಾದವು. ಆಗ ಬರವಣಿಗೆಯ ವೇಗ ತಗ್ಗಿಸಲು, ಈಗ ವೇಗ ಹೆಚ್ಚಿಸಲು ಸಾಧ್ಯವಿಲ್ಲದಂಥ ಮನೋಧರ್ಮ ಮತ್ತು ಸಾಮಾಜಿಕ ಸಂದರ್ಭಗಳು ಅಚ್ಚರಿ ಹುಟ್ಟಿಸುತ್ತಿವೆ. ಎರಡು ಜನಪರ ಚಳವಳಿಗಳು ಮತ್ತು ವೈಯಕ್ತಿಕ ಬಾಧೆಗಳು ಕಥೆಗಳಿಗೆ ಪ್ರೇರಣೆ ನೀಡಿದ್ದವು. ಶಿವರಾಮ ಕಾರಂತರ ಪರಿಸರ ಚಳವಳಿ, ಎಂ.ಡಿ. ನಂಜುಂಡ ಸ್ವಾಮಿ ಅವರ ರೈತ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದು ಕೆಲವು ಕಥೆಗಳಿಗೆ ಸೈದ್ಧಾಂತಿಕ ಚೌಕಟ್ಟು ನೀಡಿರಬಹುದು.

ಅದಕ್ಕಿಂತ ಮುಖ್ಯವಾಗಿ ನನ್ನ ವ್ಯಕ್ತಿತ್ವ ಮತ್ತು ಮಾತಿನ ಮೇಲೆ ಗಾಢ ಪ್ರಭಾವ ಬೀರಿದ್ದು ನನ್ನ ಅಮ್ಮ. ಬಹುತೇಕ ಲಂಕೇಶರ 'ಅವ್ವ' ಕವಿತೆಯ ವಸ್ತುವಿನಂತಿರುವ ನನ್ನ ತಾಯಿ ಅಸಾಧಾರಣ ಹೆಂಗಸು. 'ಬನ್ನೇರಿ', 'ಪುಟ್ಟಕ್ಕನ ಮೆಡಿಕಲ್ ಕಾಲೇಜು', 'ವಲಸೆ ಹಕ್ಕಿ ಹಾಡು'ವಿನಲ್ಲಿ ಬರುವ ಹೊಂಬಾಳಮ್ಮ, ಗಾಯ ಕಥೆಯಲ್ಲಿ ಬರುವ ಗ್ರಾಮ್ಯ ಚಿತ್ರಣ, ನುಡಿಗಟ್ಟು, ಗಾದೆ, ರೂಪಕಗಳ ಬಳಕೆ ಇವೆಲ್ಲವೂ ಅವ್ವನ ಬಳುವಳಿ. ಮುಪ್ಪಿನಿಂದ ಕುಗ್ಗಿರುವ ನನ್ನವ್ವ ಈಗಲೂ ನನಗೊಂದು ಕೌತುಕದ ಸೆಲೆ. ಅವಳ ಆಕ್ರಮಣಶೀಲತೆ, ವಾಚಾಳಿತನ, ನ್ಯಾಯಪರತೆ, ಸಿಟ್ಟು, ಮಂಡಿನೋವು ಮತ್ತು ದೈವಭಕ್ತಿ ಇವುಗಳಲ್ಲಿ ಕೊನೆಯದೊಂದನ್ನು ಬಿಟ್ಟು ಉಳಿದೆಲ್ಲವನ್ನೂ ನಾನು ಪಡೆದಿದ್ದು, ಅವು ನನ್ನ ಕಥೆಗಳಲ್ಲಿ ಅಷ್ಟಿಷ್ಟು ಕಾಣಿಸಿಕೊಂಡಿವೆ. ಬರವಣಿಗೆಯನ್ನು ತಡವಾಗಿ ರೂಢಿಸಿಕೊಂಡ ನನ್ನ ಅಕ್ಕ 'ಚಂದಿರನೇತಕೆ ಓಡುವನಮ್ಮ' ಎಂಬ ನನ್ನ ಬಾಲ್ಯಕಥನವನ್ನು ಅವಳ ಗ್ರಹಿಕೆಯಿಂದ ರೂಪಿಸಿದ್ದಾಳೆ. ಪುಷ್ಪ ನಾಗತಿಹಳ್ಳಿ ತನ್ನ ಮೂರನೆಯ ಕೃತಿಯನ್ನೀಗ ಪ್ರಕಟಿಸುತ್ತಿದ್ದಾಳೆ. ಅವಳು ತನ್ನ ಕೃತಿಗಳಲ್ಲಿ ನನಗಿಂತ ಹೆಚ್ಚು ದಟ್ಟವಾದ ಗ್ರಾಮ್ಯ ವಿವರಗಳನ್ನು ದಾಖಲಿಸಿದ್ದಾಳೆ. ಎರಡು ವರ್ಷ ಅಂತರವುಳ್ಳ ನಾವು ಒಂದೇ ನೆಲ, ಪರಿಸರದಲ್ಲಿ ಹುಟ್ಟಿ ಬೆಳೆದು ಹೇಗೆ ಭಿನ್ನವಾಗಿ ಗ್ರಹಿಸಿದೆವು ಎಂಬ ಕುತೂಹಲ ನನ್ನದು.

ನಾನು ಪ್ರಜ್ಞಾಪೂರ್ವಕವಾಗಿ ಕೆಲವು ಮಿತ್ರರನ್ನು ಸಾಹಿತ್ಯೇತರ ವಲಯದಿಂದ ಹೆಕ್ಕಿಕೊಳ್ಳುತ್ತಿದ್ದೆ. ಒಬ್ಬರಿನ್ನಿಲ್ಲಿ ಹೆಸರಿಸಬೇಕು. ಅವರು ಕಡೂರಿನ ದಶರಥಶೆಟ್ಟರ ಪುತ್ರರಾದ, ಒಂದು ಕಾಲಕ್ಕೆ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಸನ್‌ರೈಸ್ ಜುವೆಲರ್ಸ್ ಇರಿಸಿಕೊಂಡಿದ್ದ,